

# ಜಾಮ್ ಸಾಹೇಬ!

ಪ್ರವೀಣ ಕುಲಕರ್ಣಿ

ಕನ್ನಡದ ಕವಿಪುಂಗವರಲ್ಲಿ ಒಬ್ಬರಾದ ಸಿದ್ದಯ್ಯ ಪುರಾಣಿಕರ ಪ್ರಸಿದ್ಧ 'ಅಜ್ಜನ ಕೋಲಿದು ನನ್ನಯ ಕುದುರೆ' ಶಿಶುಗೀತೆಯಲ್ಲಿ 'ಕಾಠೇವಾಡದಿ ಕಾಣದ ಕುದುರೆ' ಎಂಬ ಸಾಲು ಬರುತ್ತದೆ. ಯಾವುದೀ ಕಾಠೇ(ಥೇ)ವಾಡ ಎಂಬ ಪ್ರಶ್ನೆಯೂ ದಿಗ್ಗನೇ ಎದುರಾಗುತ್ತದೆ. ಗುಜರಾತ್‌ನ ಕರಾವಳಿ ತೀರದ ಕಾಥೇವಾಡ ಪ್ರಾಂತ್ಯವನ್ನೇ ಕವಿ ಇಲ್ಲಿ ಪ್ರಸ್ತಾಪಿಸಿದ್ದಾರೆ ಎಂದುಕೊಳ್ಳೋಣ. ಕಾಥೇವಾಡದ ಕುದುರೆಯೇ ಅಷ್ಟೊಂದು ಖ್ಯಾತಿ ಗಳಿಸಿದೆ ಅಂದಮೇಲೆ ಅಲ್ಲಿನ ರಾಜಮನೆತನ ಎಷ್ಟೊಂದು ಪ್ರಭಾವಿ ಆಗಿರಬೇಡ ಎಂಬ ಕುತೂಹಲ ಕಾಡುವುದಲ್ಲವೇ? ಅಂತಹ ಪ್ರಭಾವಿ ಕಾಥೇವಾಡ ಪ್ರಾಂತ್ಯದ ಒಂದು ಸಂಸ್ಥಾನ ಜಾಮ್‌ನಗರ. ಈಗ ಈ ಸಂಸ್ಥಾನ ಅಸ್ತಿತ್ವದಲ್ಲಿ ಇಲ್ಲವಾದರೂ ಇಲ್ಲಿನ ರಾಜಮನೆತನದ ಉತ್ತರಾಧಿಕಾರಿಯಾಗಿ ಮಾಜಿ ಕ್ರಿಕೆಟಿಗ ಅಜಯ್ ಜಡೇಜ ನೇಮಕಗೊಂಡಿದ್ದಾರೆ. ಅಂದರೆ ಇನ್ನುಮುಂದೆ ಅವರ ಹೆಸರಿನ ಆರಂಭದಲ್ಲಿ 'ಜಾಮ್ ಸಾಹೇಬ' ಎಂಬ ವಿಶೇಷಣವೂ ಅಂಟಿಕೊಳ್ಳಲಿದೆ.

ಜಾಮ್‌ನಗರ ರಾಜಮನೆತನದ ಈಗಿನ ಮುಖ್ಯಸ್ಥ ಶತ್ರುಶಲ್ಯಸಿಂಹ, ಉತ್ತರಾಧಿಕಾರಿಯನ್ನಾಗಿ ತಮ್ಮ ಸಹೋದರಿಯ ಪುತ್ರ ಅಜಯ್ ಅವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. 'ವನವಾಸ, ಅಜ್ಞಾತವಾಸ ಮುಗಿಸಿ ಪಾಂಡವರು ವಿಜಯಿಯಾಗಿ ಮರಳಿದ ದಿನದಂದು ದಸರೆ ಆಚರಿಸಲಾಗುತ್ತದೆ. ಈ ಶುಭದಿನ ನನ್ನ ಮುಂದಿದ್ದ ದ್ವಂದ್ವವೊಂದು ಕೊನೆಗೊಂಡಿದ್ದು, ಅಜಯ್ ನನ್ನ ಸ್ಥಾನಕ್ಕೆ ಉತ್ತರಾಧಿಕಾರಿಯಾಗಲಿದ್ದಾರೆ' ಎಂದು ಅವರು ಘೋಷಿಸಿದ್ದಾರೆ.

ಅರಬ್ಬಿ ಸಮುದ್ರದ ದಂಡೆಯ ಮೇಲಿರುವ ಜಾಮ್‌ನಗರ ಅಥವಾ ನವನಗರವನ್ನು 1540ರಿಂದ 1948ರವರೆಗೆ ಆಳಿದವರು ಜಡೇಜ ಮನೆತನದವರು. ರಜಪೂತ ವಂಶಕ್ಕೆ ಸೇರಿರುವ ಈ ರಾಜಮನೆತದವರು ದೊಡ್ಡ ಸೈನ್ಯ ಪಡೆಯನ್ನೂ ಹೊಂದಿದ್ದರು. ಮೊಗಲ್ ದೊರೆಗಳ ರಾಜ್ಯಭಾರದ ಕಾಲದಲ್ಲಿ ಹಲವು ಏಳು–ಬೀಳುಗಳನ್ನು ಕಂಡ ಸಂಸ್ಥಾನವಿದು. ಜಾಮ್‌ನಗರಕ್ಕೆ ರಣಜಿತ್‌ಸಿಂಹಜಿ ಅವರು ರಾಜನಾಗಿದ್ದಾಗ ವಿಶಾಲವಾದ ರಸ್ತೆಗಳನ್ನು ನಿರ್ಮಿಸಿದರು. ಸುಂದರವಾದ ಮಾರುಕಟ್ಟೆಗಳನ್ನೂ ಕಟ್ಟಿದರು. ಉದ್ಯಾನಗಳನ್ನು ಸಹ ಅವರು ನಿರ್ಮಿಸಿದರು. ಊರಿಗೆ ಊರೇ ಅವರ ಆಡಳಿತಾವಧಿಯಲ್ಲಿ ರೂಪಾಂತರ ಹೊಂದಿತು. ಹೀಗಾಗಿ 'ಕಾಥೇವಾಡದ ಮುತ್ತು' ಎಂಬ ಬಿರುದನ್ನೂ ಈ ಸಂಸ್ಥಾನ ಪಡೆದಿತ್ತು. ಮುಂಬೈ ಹೊರತುಪಡಿಸಿದರೆ ಭೂಸೇನೆ, ವಾಯು ಹಾಗೂ ಜಲ – ಮೂರೂ ಪಡೆಗಳಿಗೆ ನೆಲೆ ಒದಗಿಸಿದ ಇನ್ನೊಂದು ನಗರವೆಂದರೆ ಅದು ಜಾಮ್‌ನಗರ.

ಜಾಮ್‌ಸಾಹೇಬರಾಗಿದ್ದ ರಣಜಿತ್‌ಸಿಂಹ ವಿಶ್ವದ ಅತ್ಯುತ್ತಮ ಕ್ರಿಕೆಟಿಗರಲ್ಲಿ ಒಬ್ಬರಾಗಿ ಹೆಸರಾದವರು. ಅವರು ಕ್ರಿಕೆಟ್‌ಗೆ ಕೊಟ್ಟ ಕೊಡುಗೆ ಕಾರಣದಿಂದಲೇ ಭಾರತದಲ್ಲಿ ಈ ಕ್ರೀಡೆ ಇಷ್ಟೊಂದು ಬೃಹದಾಕಾರವಾಗಿ ಬೆಳೆಯಲು ಸಾಧ್ಯವಾಯಿತು. ದೇಶಿ ಕ್ರಿಕೆಟ್ ಚಾಂಪಿಯನ್‌ಷಿಪ್‌ಗಾಗಿ ಅವರ ಹೆಸರಿನಲ್ಲೇ ಈಗ ರಣಜಿ ಟ್ರೋಫಿ ಟೂರ್ನಿ ನಡೆಸಲಾಗುತ್ತದೆ. ಇದೇ ಮನೆತನಕ್ಕೆ ಸೇರಿದ ದುಲೀಪ್‌ಸಿಂಹ ಅವರೂ ಅಸಾಮಾನ್ಯ ಕ್ರಿಕೆಟಿಗರಾಗಿದ್ದರು. ಇಂತಹ ವಂಶದ ಕುಡಿ ಅಜಯ್ ಜಡೇಜ. ಅತ್ಯುತ್ತಮ ಆಲ್‌ರೌಂಡರ್ ಆಗಿ ಹೆಸರು ಮಾಡಿದ್ದ ಅವರ ಕಲಾತ್ಮಕ ಬ್ಯಾಟಿಂಗ್ ಶೈಲಿ ಕ್ರಿಕೆಟ್‌ಪ್ರಿಯರ ಮನಸೂರೆಗೊಂಡಿತ್ತು. 1992ರಿಂದ 2000 ಅವಧಿಯಲ್ಲಿ ಭಾರತ ತಂಡದ ಪರ 196 ಏಕದಿನ ಪಂದ್ಯ ಹಾಗೂ 15 ಟೆಸ್ಟ್ ಪಂದ್ಯಗಳನ್ನು ಅವರು ಆಡಿದ್ದಾರೆ. ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಅಜಯ್ ಅವರ ಹೆಸರೂ ತಳಕು ಹಾಕಿಕೊಂಡಿತ್ತು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಅವರ ಮೇಲೆ ಆಜೀವ ನಿಷೇಧ ವಿಧಿಸಿತ್ತು. ನಂತರ ನಿಷೇಧದ ಪ್ರಮಾಣವನ್ನು ಐದು ವರ್ಷಗಳಿಗೆ ಇಳಿಕೆ ಮಾಡಲಾಗಿತ್ತು. ಮುಂದೆ ಕೋರ್ಟ್‌ನಲ್ಲಿ ದಾವೆ ಹೂಡಿ, ದೋಷಮುಕ್ತರಾದರೂ ಅಜಯ್ ಮತ್ತೆ ಆಟಗಾರನಾಗಿ ಅಂಗಳಕ್ಕೆ ಇಳಿಯಲಿಲ್ಲ.

ಅಜಯ್ ಪಾಲಿಗೆ ಉತ್ತರಾಧಿಕಾರದ ಪಟ್ಟ ಕೇವಲ ಆಲಂಕಾರಿಕ ಹುದ್ದೆಯಲ್ಲ. ರಾಜಮನೆತನದ ₹ 1,450 ಕೋಟಿ ಮೌಲ್ಯದ ಆಸ್ತಿಗೂ ಅವರು ಒಡೆಯರಾಗಲಿದ್ದಾರೆ. ಭಾರತದ ಸದ್ಯದ ಸಿರಿವಂತ ಕ್ರಿಕೆಟಿಗ ಎನಿಸಿದ ವಿರಾಟ್ ಕೊಹ್ಲಿ ಅವರನ್ನೂ ಅಜಯ್ ಹಿಂದಿಕ್ಕಲಿದ್ದಾರೆ ಎಂಬುದೊಂದು ಅಂದಾಜು. ಈ ಜಾಮ್ ಸಾಹೇಬ ಕೇವಲ ಕ್ರಿಕೆಟ್‌ಗೆ ಅಂಟಿಕೊಂಡು ಕುಳಿತವರಲ್ಲ. ನಿವೃತ್ತರಾದ ಮೇಲೆ ಮನರಂಜನಾ ಕ್ಷೇತ್ರದ ಕಡೆಗೂ ವಾಲಿದ ಅವರು, 'ಖೇಲ್', 'ಪಲ್ ಪಲ್ ದಿಲ್ ಸಾಥ್' ಸೇರಿದಂತೆ ಬಾಲಿವುಡ್ ಸಿನಿಮಾಗಳಲ್ಲೂ ನಟಿಸಿದ್ದಾರೆ. 'ಝಲಕ್ ದಿಖ್ಲಾ ಜಾ'ದಂತಹ ರಿಯಾಲಿಟಿ ಶೋಗಳಲ್ಲಿ ಪಾಲ್ಗೊಂಡು, ನೃತ್ಯದಲ್ಲೂ ಸೈ ಎನಿಸಿಕೊಂಡಿದ್ದಾರೆ. ಕ್ರಿಕೆಟ್ ವೀಕ್ಷಕ ವಿವರಣೆಕಾರನಾಗಿ, ವಿಶ್ಲೇಷಕನಾಗಿ ಕಾಣಿಸಿಕೊಂಡಿದ್ದಾರೆ. ಭಾರತ ಕ್ರಿಕೆಟ್ ತಂಡದ ಆಟಗಾರನಾಗಿದ್ದ ದಿನಗಳಲ್ಲಿ ಅಜಯ್ ಅವರು ನಟಿ ಮಾಧುರಿ ದೀಕ್ಷಿತ್ ಅವರೊಂದಿಗೆ ಪ್ರೇಮಪಾಶದಲ್ಲಿ ಬಿದ್ದಿದ್ದಾರೆ ಎಂಬ ಗುಲ್ಲು ಎದ್ದಿತ್ತು. ಇಬ್ಬರೂ ಒಟ್ಟಿಗಿರುವ ಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ, ಆ ಗುಲ್ಲು ಇನ್ನಷ್ಟು ಹಬ್ಬಲು ಪುಷ್ಟಿ ನೀಡಿದ್ದವು.

ಜಾಮ್‌ನಗರದಲ್ಲಿ ಅಜಯ್ ಸದ್ಯ ವಾಸವಾಗಿರುವುದು ಕೂಡ ಅರಮನೆಯೇ. ಅವರ ತಂದೆ ಜಾಮ್‌ನಗರದಿಂದ ಮೂರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಈಗಾಗಲೇ ನಾನಾ ಅವತಾರ ಎತ್ತಿರುವ ಹೊಸ ಜಾಮ್ ಸಾಹೇಬ, ಈಗ ಪರಂಪರೆಗೆ ಸೀಮಿತವಾಗಿ ಉಳಿದಿರುವ ಸಿಂಹಾಸನವನ್ನೂ ಏರುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65